## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಇವರು ನಿಯಮ 330ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಹೇಳಿಕೆ

ವಿಷಯ: ಪಶ್ಚಿಮಘಟ್ಟ ಪ್ರದೇಶದಲ್ಲಿ ಅತೀ ಹೆಚ್ಚು ಮಳೆಯಾಗಿ ಉತ್ತರ ಕರ್ನಾಟಕ ಭಾಗದ ಜೀವ ನದಿಗಳಾಗಿರುವ ಕೃಷ್ಣಾ ನದಿ, ದೂದ್‌ಗಂಗಾ, ವೇದಗಂಗಾ, ಘಟಪ್ರಭಾ ಮತ್ತು ಮಲಪ್ರಭಾ ನದಿಗಳು ತುಂಬಿ ಉಕ್ಕಿ ಹರಿದು, ತೀರ ಪ್ರದೇಶಗಳ ಜನರ ಅಪಾರ ಪ್ರಮಾಣದ ಆಸ್ತಿ ಪಾಸ್ತಿಗಳು, ಬೆಳೆದ ಬೆಳೆಗಳು, ವಾಸದ ಮನೆಗಳು ಹಾನಿಯಾಗಿರುವ ಹಿನ್ನಲೆಯಲ್ಲಿ ಕೃಷ್ಣಾ ನದಿ ನೀರನ್ನು ಸದ್ಬಳಕೆ ಮಾಡುವ ವಿಚಾರದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರ ಎರಡೂ ರಾಜ್ಯಗಳ ಜಂಟಿ ನಿರ್ವಹಣಾ ಸಮಿತಿ (Joint monitoring committee) ರಚಿಸುವ ಬಗ್ಗೆ ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

*****

ಜುಲೈ ಮತ್ತು ಆಗಸ್ಟ್ ಮಾಹೆಯಲ್ಲಿ ಸುರಿದ ಭಾರಿ ಮಳೆಯಿಂದ ಮಹಾರಾಷ್ಟ್ರ ಮತ್ತು ಕರ್ನಾಟಕದ ಎಲ್ಲಾ ಜಲಾಶಯಗಳು ತುಂಬಿದ್ದು, ಅಪಾರ ಪ್ರಮಾಣದ ನೀರನ್ನು ಹರಿಬಿಟ್ಟಿರುವುದರಿಂದ, ಭಾರಿ ಪ್ರಮಾಣದಲ್ಲಿ ಜನ-ಜಾನುವಾರುಗಳು, ಆಸ್ತಿಗಳು ಕಾಲುವೆಗಳು ಹಾನಿಗೊಳಗಾಗಿರುತ್ತವೆ. ಎರಡು ರಾಜ್ಯಗಳು ಜಲಾಶಯಗಳ ಬಗ್ಗೆ Standard Operating Procedure (SOP) ಮತ್ತು Reservoir Operation Schedules (ROS) ರಚಿಸಲು ಹಾಗೂ M.O.U ಮಾಡಿಕೊಳ್ಳಲು ಮಹಾರಾಷ್ಟ್ರ ರಾಜ್ಯವು ನಿರ್ಧರಿಸಿರುವುದಾಗಿ ಹಾಗೂ ದಿನಾಂಕ:08.08.2019ರಂದು Hon`ble Cabinet Secretary, G.O.I ರವರು Video Conference ನಲ್ಲಿ C.W.C ಜೊತೆ ಸಮನ್ವಯದೊಂದಿಗೆ Inter State Flood monitoring committee ಯನ್ನು ರಚಿಸುವ ಕುರಿತು ಪ್ರಸ್ತಾಪವಾಗಿದ್ದು, ಅದರಂತೆ ಮಹಾರಾಷ್ಟ್ರ ಸರ್ಕಾರದಿಂದ ಈ ಕೆಳಗಿನಂತೆ ಸಮಿತಿಯನ್ನು ರಚಿಸಲು ದಿನಾಂಕ:19.08.2019ರ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| | |
|---|---|
| 1. Secretary, CADA, Water Resources Department, GOM | President |
| 2. Secretary, Water Resources Department, GOK | Co-President |
| 3. Chief Engineer, Central Water Commission, Nagpur/Hyderabad | Member |
| 4. Executive Director, Maharashtra Krishna Valley Development Corporation | Member |
| 5. Chief Engineer, KBJNL, Almatti Dam Zone, Karnataka | Member |
| 6. Chief Engineer, Water Resources Department, Pune, Maharashtra | Member |
| 7. Superintending Engineer, Water Resources Department, Belagavi, Karnataka | Co-Member Secretary |
| 8. Superintending Engineer, Sangli Irrigation Circle, Sangli, Maharashtra | Member Secretary |

ಸದರಿ ಸಮಿತಿಯನ್ನು ರಚಿಸುವ ಕುರಿತು ಕರ್ನಾಟಕ ಸರ್ಕಾರದ ಒಪ್ಪಿಗೆ ನೀಡಲು ಸರ್ಕಾರದ ಮಟ್ಟದಲ್ಲಿ ಪರಿಶೀಲನೆಯಲ್ಲಿದೆ.

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಗಳು

ಸಂಖ್ಯೆ: ಜಸಂಇ 75 ಡಬ್ಲ್ಯೂಬಿಎಂ 2019